ಲೇಖನ 03

# ಕಳಚಿದ ಕೊಂಡಿಗಳು

ಕಾಡುಗಳೆಂದರೆ ಪಶ್ಚಿಮ ಘಟ್ಟಗಳ ದಟ್ಟ ಕಾಡುಗಳೆಂದೇ ಭಾವಿಸಿದ ಹಲವರಿಗೆ ನಮ್ಮ ವಿಜಯನಗರ ಹಾಗೂ ಬಳ್ಳಾರಿ ಅವಳಿ ಜಿಲ್ಲೆಗಳ ಕುರುಚಲು ಕಾಡುಗಳು ಅಪರಿಚಿತ. ವಿಸ್ತಾರದಲ್ಲಿ ರಾಜ್ಯದಲ್ಲೇ ಎರಡನೇ ಸ್ಥಾನದಲ್ಲಿರುವ ಕುರುಚಲು ಅರಣ್ಯ ಪ್ರದೇಶ ಈ ಉಭಯ ಜಿಲ್ಲೆಯಲ್ಲಿದೆ. ಮತ್ತೊಂದು ವಿಶೇಷವೆಂದರೆ ಅಲ್ಲಲ್ಲಿ ತುಂಗಭದ್ರಾ ನದಿಯ ಒಡಲು ಈ ಕಾಡಿಗೆ ಅಂಟಿಕೊಂಡಿದೆ.

ನಮ್ಮ ಜಿಲ್ಲೆಯ ಈ ಕುರುಚಲು ಕಾಡುಗಳು ಆಫ್ರಿಕಾ ಕಾಡುಗಳ ತದ್ರೂಪವೆಂದರೆ ಅತಿಶಯೋಕ್ತಿಯೇನಲ್ಲ. ಒಂದೇ ವ್ಯತ್ಯಾಸವೆಂದರೆ ಆಫ್ರಿಕಾದ ಕಾಡುಗಳು ವಿಸ್ತೀರ್ಣದಲ್ಲಿ ಬೃಹತ್ ಮತ್ತು ಅಖಂಡ ಕಾಡುಗಳು. ಆದರೆ ನಮ್ಮ ಭಾಗದ ಕಾಡುಗಳು ಮಾನವನ ಹಸ್ತಕ್ಷೇಪದಿಂದ ತುಂಡು ತುಂಡಾಗಿ ಹರಿದು ಹಂಚಿ ಹೋಗಿವೆ. ಉಪಗ್ರಹ ಆಧಾರಿತ ಅಧ್ಯಯನದ ಪ್ರಕಾರ 2000 ಕ್ಕಿಂತ ಹೆಚ್ಚು ತುಂಡುಗಳಾಗಿವೆ! ಅಲ್ಲಲ್ಲಿ ಅಳಿದುಳಿದಿರುವ ಕೆಲವು ತುಂಡುಗಳನ್ನು "ಮೀಸಲು ಅರಣ್ಯ ಪ್ರದೇಶ" ಗಳೆಂದು ನಾಮಕರಣ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ದರೋಜಿ, ಸಂಡೂರು, ಗುಡೇಕೋಟೆ, ಆನೇಕಲ್ಲು, ಬಪ್ಪಲಾಪುರ, ಕಂದಗಲ್ಲು, ಚಿರಬಿ, ಪಾಲಯ್ಯನಕೋಟೆ, ಅರಸನಾಳು, ತುಂಬಿನಕೆರೆ, ವೀರಾಪುರ, ಹ್ಯಾರಡದಂತಹ ಮೀಸಲು ಅರಣ್ಯ ಪ್ರದೇಶಗಳೇ ಪ್ರಸ್ತುತ ದೊಡ್ಡ ಕಾಡಿನ ತುಂಡುಗಳು. ದುರಾದೃಷ್ಟವೆಂದರೆ ಈ ಮೇಲ್ಕಾಣಿಸಿದ ಬಹುತೇಕ ಕಾಡುಗಳು ಪ್ರಮುಖ ಜೀವಜಲದ ಮೂಲವಾದ ತುಂಗಭದ್ರ ನದಿಯಿಂದ ಬೇರ್ಪಟ್ಟಿವೆ.

ಇದರ ಪರಿಣಾಮ ಅರಣ್ಯ ಪರಿಸರ ಮತ್ತು ವನ್ಯ ಜೀವ ಸಂಕುಲಕ್ಕೆ ಆಗಿರುವ ನಷ್ಟ ಅಷ್ಟಿಷ್ಟಲ್ಲ. ಅದಕ್ಕೆ ಲೆಕ್ಕವೂ ಇಲ್ಲ, ವಿಷಾದವೂ ಇಲ್ಲ, ಅದರ ನಷ್ಟದ ಊಹೆಯೂ ಇಲ್ಲ.
ವಿಪರ್ಯಾಸವೆಂದರೆ ಯಾರಿಗೂ ಭವಿಷ್ಯದ ಭಯವೂ ಇಲ್ಲ!!!




ಸೀಮಿತ ಅರಣ್ಯದಿಂದಾಗಿ ವನ್ಯ ಜೀವಿಗಳಲ್ಲಿ In Breeding ಅಂದರೆ ಒಂದೇ ಕುಟುಂಬದಲ್ಲಿ ಸಂತಾನೋತ್ಪತ್ತಿ ನಡೆಸುವುದರಿಂದ ಹೊಸ ಪೀಳಿಗೆಯಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಸಂತತಿ ಕ್ಷೀಣಿಸುತ್ತಿದೆ. ಅದಲ್ಲದೆ ಛಿದ್ರಗೊಂಡ ಅರಣ್ಯದಿಂದಾಗಿ ವಲಸೆ ಮಾರ್ಗಗಳು ಮುಚ್ಚಿ ಹೋಗಿರುವುದರಿಂದ ವನ್ಯ ಜೀವಿಗಳು ಆಹಾರ, ನೀರು ಅರಸಿಕೊಂಡು ಜನವಸತಿ ಪ್ರದೇಶಗಳಿಗೆ ಲಗ್ಗೆ ಇಡುತ್ತಿವೆ. ಇದರಿಂದ ಆಗುವ ಸಂಘರ್ಷದಿಂದ ವನ್ಯ ಜೀವಿಗಳು ಜೀವ ಕಳೆದುಕೊಳ್ಳುತ್ತಿವೆ.

ಇದಕ್ಕೆ ಪೂರಕವಾಗಿ ಕಳೆದ ಒಂದು ವರ್ಷದಲ್ಲೇ ಎರಡೂ ಜಿಲ್ಲೆಗಳಲ್ಲಿ ಕರಡಿ, ತೋಳ, ಚಿರತೆ, ಕೃಷ್ಣಮೃಗ ಇತ್ಯಾದಿ ಪ್ರಾಣಿಗಳು ಹಲವು ಬಾರಿ ಜನವಸತಿ ಪ್ರದೇಶಗಳಲ್ಲಿ ಕಂಡು ಬಂದಿದ್ದು, ಮಾನವ ಮತ್ತು ವನ್ಯಜೀವಿ ಸಂಘರ್ಷಕ್ಕೆ ಕೈಗನ್ನಡಿಯಾಗಿವೆ. ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ನಡೆಯುತ್ತಿರುವ ಆನೆದಾಳಿ ಮತ್ತು ಹುಲಿದಾಳಿಗಳ ನಡುವೆ ನಮ್ಮ ಜಿಲ್ಲೆಯಲ್ಲಿನ ಕುರುಚಲು ಕಾಡುಗಳಲ್ಲಿ ನಡೆಯುತ್ತಿರುವ ಈ ಸಂಘರ್ಷದ ಕೂಗು ಮೂಕ ಹಕ್ಕಿಯ ಹಾಡಾಗಿದೆ.


ಚಿತ್ರ ಕೃಪೆ: ಮಂಜುನಾಥ ಕಣವಿ

ಹುಲಿ, ಆನೆಗಳನ್ನು ಉಳಿಸಿ ಬೆಳೆಸುವ ಭರದಲ್ಲಿ ನಮ್ಮ ಭಾಗದ ಕುರುಚಲು ಕಾಡಿನ ವನ್ಯ ಜೀವಿಗಳಾದ ತೋಳ, ಕತ್ತೆಕಿರುಬ (Hyna), ಕೊಂಡುಕುರಿ (Four Horned anti loop), Indian pangolin, ಪುನುಗು ಬೆಕ್ಕು, ಚಿಂಕಾರ, ಕರಡಿ, ನರಿಯಂತಹ ಅನೇಕ ವನ್ಯ ಜೀವಿಗಳ ಅಳಲನ್ನು ಕೇಳುವವರಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಹುಲಿಗಳನ್ನು ನೋಡುವುದು ಸುಲಭ. ಆದರೆ ತೋಳಗಳನ್ನು ಕಾಣಸಿಗುವುದು ಕಷ್ಟಸಾಧ್ಯ. ಕಾಕತಾಳೀಯವೆಂಬಂತೆ ಇತ್ತೀಚಿನ ದಿನಗಳಲ್ಲಿ ವನ್ಯಜೀವಿ ಆಸಕ್ತರು, ಛಾಯಾಗ್ರಾಹಕರು, ಪರಿಸರ ಅಧ್ಯಯನಕಾರರು, ಕುರುಚಲು ಕಾಡಿನ ವನ್ಯಜೀವಿಗಳ ಕಡೆಗೆ ಆಸಕ್ತಿ ತೋರಿಸುತ್ತಿರುವುದು ಧನಾತ್ಮಕ ಬೆಳವಣಿಗೆಯಾಗಿದೆ.

ಈ ಕಾಡುಗಳು ಮತ್ತು ವನ್ಯ ಜೀವಿಗಳ ಸಂರಕ್ಷಣೆಗೆ ಉಳಿದಿರುವ ಏಕೈಕ ಮಾರ್ಗವೆಂದರೆ fragmentation ಅಥವಾ ತುಂಡು ತುಂಡಾಗಿ ಛಿದ್ರಗೊಂಡಿರುವ ಕಾಡುಗಳ ಮರುಜೋಡಣೆ ಅದುವೇ Forest Corridor. ಫಾರೆಸ್ಟ್ ಕಾರಿಡಾರ್‌ಗಳು ಸೇತುವೆಯಂತೆ ತುಂಡಾದ ಎರಡು ಕಾಡುಗಳನ್ನು ಬೆಸೆದು ಪರಿಸರ ಮತ್ತು ವನ್ಯಜೀವಿಗಳ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಬಲ್ಲವು. ಈಗಾಗಲೇ ಈ ಮಾದರಿಯನ್ನು ಹಲವು ದೇಶಗಳು ಯಶಸ್ವಿಯಾಗಿ ಬಳಸಿದ ಹಲವು ಉದಾಹರಣೆಗಳಿವೆ. ಇದೇ ರೀತಿಯಾಗಿ ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಈಗಾಗಲೇ ಪ್ರಸ್ತಾಪಿಸಿದ ತುಂಡು ತುಂಡಾದ ಕುರುಚಲು ಕಾಡುಗಳನ್ನು ಬೆಸೆಯಲು Corridor Project (ಅರಣ್ಯ ಪ್ರದೇಶಗಳ ಮರು ಜೋಡಣೆ) ಅನಿವಾರ್ಯ ಮತ್ತು ಅವಶ್ಯಕ.

ಹಗರಿಬೊಮ್ಮನಹಳ್ಳಿಯ ಪರಿಸರದಲ್ಲಿ ಸಂರಕ್ಷಣೆಯಲ್ಲಿ ವೈಜ್ಞಾನಿಕವಾಗಿ ತೊಡಗಿಕೊಂಡಿರುವ "Green-HBH" ತಂಡ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಉಭಯ ಜಿಲ್ಲೆಗಳಲ್ಲಿ 11 ಪ್ರಮುಖ ಕಾರಿಡಾರ್ ಪಾಯಿಂಟ್‌ಗಳನ್ನು ಗುರುತಿಸಿದೆ. ಅದಲ್ಲದೆ ಆ ಬಗ್ಗೆ ಸವಿಸ್ತಾರವಾದ ವರದಿಯನ್ನು [D P R] ಸಿದ್ಧಪಡಿಸಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ.

ಆಶ್ಚರ್ಯದ ಸಂಗತಿಯೆಂದರೆ ಈ 11 ತುಂಡುಗಳನ್ನು ಬೆಸೆಯಲು ಬೇಕಾಗಿರುವುದು ಕೇವಲ 365 ಹೆಕ್ಟೇರ್ ಮಾತ್ರ. ಹಾಗೆ ಮಾಡಿದಲ್ಲಿ ಪೂರ್ವದ ದರೋಜಿಯಿಂದ ಪಶ್ಚಿಮದ ಹಲವಾಗಲುವರೆಗಿನ 150 ಕಿ.ಮೀ ನಷ್ಟು ಉದ್ದದ ಅರಣ್ಯ ಭೂಮಿಯು ಏಕೀಕರಣಗೊಳ್ಳುತ್ತದೆ.

ಮಧ್ಯಪ್ರದೇಶದ ಕುನೋ ನ್ಯಾಶನಲ್ ಪಾರ್ಕ್‌ನಲ್ಲಿ ಸುಮಾರು 19 ಹಳ್ಳಿಗಳನ್ನು ಸ್ಥಳಾಂತರಗೊಳಿಸಿ ಆಫ್ರಿಕಾದಿಂದ ಚೀತಾಗಳನ್ನು ತಂದು ಬಿಟ್ಟ ಸಾಹಸದ ಮುಂದೆ ನಮ್ಮ ಬೇಡಿಕೆ ತೀರಾ ಚಿಕ್ಕದು. ಪ್ರಪಂಚದಲ್ಲೇ ಐದನೇ ದೊಡ್ಡ ಆರ್ಥಿಕತೆ ಹೊಂದಿರುವ ಮತ್ತು ತಿಂಗಳಿಗೆ 2 ಲಕ್ಷ ಕೋಟಿಗೂ ಮೀರಿ G.S.T ತೆರಿಗೆ ಸಂಗ್ರಹಿಸುವ ವಿಕಸಿತ ಭಾರತಕ್ಕೆ 365 ಹೆಕ್ಟೇರ್ ಭೂಮಿ ಖರೀದಿಸಿ ಅರಣ್ಯ ಪರಿವರ್ತನೆ ಮಾಡುವುದು ಯಾವ ಲೆಕ್ಕಾ? ಅದೂ ಸಹ ಕಷ್ಟವಾದಲ್ಲಿ ಇಲ್ಲಿದೆ ಇನ್ನೊಂದು ಪರ್ಯಾಯ ಮಾರ್ಗ ಅದುವೇ C.A ಪಾಲಿಸಿ. ಪರಿಹಾರಾತ್ಮಕ ನಡುತೋಪು ನೀತಿ [Compensatory afforestation Policy] ಹಾಗೂ ದಂಡನಾತ್ಮಕ ಪರಿಹಾರಾತ್ಮಕ ನಡುತೋಪು ನೀತಿಗಳು ಈಗಾಗಲೇ ಜಾರಿಯಲ್ಲಿದ್ದು ಸರ್ಕಾರವು ಈ ನೀತಿಗಳನ್ನು ಬಳಸಿಕೊಂಡು ನಯಾಪೈಸೆಯ ಖರ್ಚಿಲ್ಲದೆ ಕಾರಿಡಾರ್ ಯೋಜನೆಯನ್ನು ಪೂರ್ಣಗೊಳಿಸಬಹುದು.

ಉಭಯ ಜಿಲ್ಲೆಗಳಲ್ಲಿ ಈಗಾಗಲೇ C.A Policy ಅಡಿಯಲ್ಲಿ ಹಲವು ಗಣಿಗಾರಿಕೆ ಉದ್ಯಮಗಳು, ಪವನ ವಿದ್ಯುತ್ ಉತ್ಪಾದನಾ ಸಂಸ್ಥೆಗಳು, ವಿದ್ಯುತ್ ಪ್ರಸರಣ ಸಂಸ್ಥೆಗಳು, ಸದುದ್ದೇಶಕ್ಕಾಗಿ ಅರಣ್ಯ ಭೂಮಿಯನ್ನು ಪಡೆದ ಬಳಕೆದಾರ ಸಂಸ್ಥೆಗಳಾಗಿವೆ.

C.A ನೀತಿಯ ಪ್ರಕಾರ ಅರಣ್ಯ ಭೂಮಿಪಡೆದ ಈ ಬಳಕೆದಾರ ಸಂಸ್ಥೆಗಳು “ಭೂಮಿಗೆ ಪರ್ಯಾಯವಾಗಿ ಭೂಮಿ” ಯನ್ನು ಖಾಸಗಿಯವರಿಂದ ಖರೀದಿಸಿ ಅರಣ್ಯ ಇಲಾಖೆಗೆ ಹಸ್ತಾಂತರಿಸಬೇಕು. ಅದಲ್ಲದೆ ಹಸ್ತಾಂತರಿಸಿದ ಭೂಮಿಯನ್ನು ಅರಣ್ಯೀಕರಣಗೊಳಿಸಲು ಪ್ರತಿ ಹೆಕ್ಟರ್‌ಗೆ 18 ಲಕ್ಷ ರೂಪಾಯಿಗಳನ್ನು ಅರಣ್ಯ ಇಲಾಖೆಗೆ ಪಾವತಿಸಬೇಕು.

ವಿಜಯನಗರ-ಬಳ್ಳಾರಿ ಉಭಯ ಜಿಲ್ಲೆ ಒಂದರಲ್ಲೇ ಬಳಕೆದಾರ ಸಂಸ್ಥೆಗಳು [USER AGENCY] ಸುಮಾರು 4000 ಎಕರೆಗೂ ಹೆಚ್ಚಿನ ಭೂಮಿಯನ್ನು ಅರಣ್ಯ ಇಲಾಖೆಗೆ ಕೊಡಬೇಕಾದ ಬಾಕಿ ಭೂಮಿಯಾಗಿ ಉಳಿಸಿಕೊಂಡಿವೆ!!

Forest Corridor ಯೋಜನೆಯನ್ನು ಸಾಕಾರಗೊಳಿಸಲು ಇದು ಶೂನ್ಯ ವೆಚ್ಚದ ಮಾರ್ಗ. ಸಹಜವಾಗಿ ಬಳಕೆದಾರ ಸಂಸ್ಥೆಗಳು ಯಾವ ಪ್ರದೇಶದಲ್ಲಿ ಭೂಮಿ ಕಡಿಮೆಬೆಲೆಗೆ ಸಿಗುತ್ತದೆಯೋ ಅದನ್ನೇ ಕೊಂಡುಕೊಂಡು ಅರಣ್ಯ ಇಲಾಖೆಗೆ ಹಸ್ತಾಂತರಿಸುತ್ತಾರೆಯೇ ಹೊರತು ನಮಗೆ ಅವಶ್ಯಕತೆಯಿರುವ ಕಾರಿಡಾರ್ ನಿರ್ಮಿಸಬೇಕಾದ ಭೂಮಿಯನ್ನೇನಲ್ಲ. ಇದೊಂದು ಔಪಚಾರಿಕ ಕಾರ್ಯಕ್ರಮವಾಗಿದೆ. ಸರಕಾರ ಮಾಡಬೇಕಾಗಿರುವುದು ಇಷ್ಟೇ ಹರಿದುಹಂಚಿದ ವಿಶೇಷ ಕುರುಚಲು ಕಾಡುಗಳನ್ನು ಒಂದುಗೂಡಿಸುವ ಕಾರಿಡಾರ್ ಪ್ರಾಜೆಕ್ಟ್‌ಗೆ ಬೇಕಾದ ಭೂಮಿಯನ್ನು ಆದ್ಯತೆಯ ಮೇರೆಗೆ ಕೊಡಿಸುವಂತೆ ಬಳಕೆದಾರ ಸಂಸ್ಥೆಗಳಿಗೆ ಸೂಚಿಸಬೇಕು. ಇದನ್ನು ಕಾರ್ಯಗತ ಮಾಡಿದ ಬಳಕೆದಾರ ಸಂಸ್ಥೆಗಳಿಗೆ ಪ್ರೋತ್ಸಾಹವಾಗಿ ಹೆಚ್ಚಿನ "Green Credit”ಗಳನ್ನು ನೀಡಬೇಕು.

ಹಾಗೆ ಮಾಡಿದಲ್ಲಿ ರಾತ್ರೋರಾತ್ರಿ ಪೂರ್ವದ ದರೋಜಿ ಅರಣ್ಯ ದಕ್ಷಿಣದ ಹಲವಾಗಲು ಅರಣ್ಯದವರೆಗೆ ಒಂದುಗೂಡುತ್ತದೆ. ನಾವೇ ಕಳಚಿಟ್ಟ ಕೊಂಡಿಗಳನ್ನು ಮತ್ತೊಮ್ಮೆ ಬೆಸೆದು, ಮಾಡಿದ ತಪ್ಪನ್ನು ಯಾವುದೇ ಖರ್ಚಿಲ್ಲದೆ ತಿದ್ದಿಕೊಳ್ಳಲು ಇದೊಂದು ಕೊನೆಯ ಅವಕಾಶ.

ಒಂಚೂರು ಆಸ್ಥೆ, ವನ್ಯಸಂಕುಲದ ಮೇಲಿನ ಪ್ರೀತಿ, ನಮ್ಮ ಕುರುಚಲು ಕಾಡಿನ ಬಗ್ಗೆ ಆಸಕ್ತಿ ಇದ್ದರೆ ಸಾಕು. ಈ ಯೋಜನೆಯು ಸಾಕಾರಗೊಂಡಲ್ಲಿ ನಮ್ಮ ಈ ಕುರುಚಲು ಕಾಡುಗಳು ಮುಂದೊಂದು ದಿನ ಆಫ್ರಿಕಾದ “ಸೆರೆಂಗಾಟಿ ನ್ಯಾಷನಲ್‌ಪಾರ್ಕ್'ಗೆ ಸೆಡ್ಡು ಹೊಡೆದು ನಿಲ್ಲುವುದರಲ್ಲಿ ಆಶ್ಚರ್ಯವಿಲ್ಲ.

::::::::::::::::::::::::::::::::::::::::::::::::

**ಅಶೋಕ ಬಾವಿಕಟ್ಟಿ**
**ಗ್ರೀನ್-ಹೆಚ್‌ಬಿಹೆಚ್,**
**ಹಗರಿಬೊಮ್ಮನಹಳ್ಳಿ, ವಿಜಯನಗರ ಜಿಲ್ಲೆ**
**ಇಮೇಲ್: ashokbavikatti@gmail.com**